# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 745

ಮಾನ್ಯ ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 21.08.2026

ಉತ್ತರಿಸಬೇಕಾದ ಸಚಿವರು : ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<table>
<tr><th>ಪ್ರಶ್ನೆ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ ಗರ್ಭಿಣಿಯರ ಮತ್ತು ಶಿಶುಗಳ ಆರೈಕೆ, ಲಸಿಕೆ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳ ನಿಯಂತ್ರಣ ಪ್ರಮುಖ ಪಾತ್ರ ವಹಿಸುತ್ತಿರುವ ಆಶಾ (ASHA) ಕಾರ್ಯಕರ್ತೆಯರು ಗೌರವಧನ ವಿಳಂಬ ಪಾವತಿ ಕಡಿಮೆ ಪ್ರೋತ್ಸಾಹಧನ ಕೆಲಸದ ಒತ್ತಡ ಹಾಗೂ ಸೇವಾಭದ್ರತೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ಬಂದಿದೆ.<br><br>ಆಶಾ ಕಾರ್ಯಕರ್ತೆಯು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಶೇಷ ಮತ್ತು ತುರ್ತು ವೈದ್ಯಕೀಯ ಪರಿಸ್ಥಿತಿಗಳನ್ನು ಹೊರತುಪಡಿಸಿ ಸೀಮಿತ ಅವಧಿಯ ಕರ್ತವ್ಯ ನಿರ್ವಹಣೆಯ ಸ್ವರೂಪದ್ದಾಗಿರುತ್ತದೆ ಇವರು ಇಲಾಖೆಯ ಖಾಯಂ/ಗುತ್ತಿಗೆ/ಹೊರಗುತ್ತಿಗೆಯ ನೌಕರರಾಗಿರುವುದಿಲ್ಲ, ಇವರು ಕನಿಷ್ಠ ವೇತನದ ವ್ಯಾಪ್ತಿಗೆ ಬರುವುದಿಲ್ಲ ಮತ್ತು ಸೇವಾ ಭದ್ರತೆಯು ಅನ್ವಯಿಸುವುದಿಲ್ಲ.<br><br>ಆಶಾ ಕಾರ್ಯಕರ್ತೆಯರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ಗೌರವಧನ ಮತ್ತು ಪ್ರೋತ್ಸಾಹಧನವನ್ನು ನೀಡಲಾಗುತ್ತದೆ.ಈ ವಿವರಗಳು ಕೆಳಗಿನಂತಿವೆ.
<table>
<tr><th>ಕ್ರ ಸಂ</th><th>ವಿವರ</th><th>ಮೊತ್ತ (ರೂಪಾಯಿಗಳಲ್ಲಿ)</th></tr>
<tr><td>1</td><td>ರಾಜ್ಯ ಸರ್ಕಾರದಿಂದ ನೀಡಲಾಗುವ ಮಾಸಿಕ ಗೌರವಧನ</td><td>ರೂ.5000/-</td></tr>
<tr><td>2</td><td>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ನೀಡಲಾಗುವ ಪ್ರೋತ್ಸಾಹಧನ</td><td>ರೂ. 2000/-</td></tr>
<tr><td>3</td><td>ತಂತ್ರಾಧಾರಿತ ಪ್ರೋತ್ಸಾಹಧನ</td><td>ರೂ.1000/-</td></tr>
<tr><td>4</td><td>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ನೀಡಲಾಗುವ ಕಾರ್ಯನಿರ್ವಹಣಾ ಪ್ರೋತ್ಸಾಹಧನ ಅಂದಾಜು</td><td>ಅಂದಾಜು<br>ರೂ.500<br>ರಿಂದ<br>ರೂ.1200</td></tr>
</table></td></tr>
<tr><td>ಆ)</td><td>2023-24 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾಕಾರ್ಯಕರ್ತೆಯರ ಸಂಖ್ಯೆ ಎಷ್ಟು, ಸದರಿ ವರ್ಷದಲ್ಲಿ ಭರ್ತಿಗೊಳಿಸಲಾದ ಹುದ್ದೆಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
</table>

| | | |
|---|---|---|
| ಇ) | ಇದೇ ಅವಧಿಯಲ್ಲಿ ಆಶಾಕಾರ್ಯಕರ್ತೆಯರಿಗೆ ಪಾವತಿಸಬೇಕಾದ ಗೌರವಧನ ಮತ್ತು ಪ್ರೋತ್ಸಾಹ ಧನಗಳಲ್ಲಿ ಬಾಕಿ ಉಳಿದಿರುವ ಮೊತ್ತ ಎಷ್ಟು<br><br>(ಜಿಲ್ಲಾವಾರು ವಿವರ ನೀಡುವುದು) | ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ |
| ಈ) | ಸರ್ಕಾರದ ಯೋಜನೆಗಳ ದಾಖಲಾತಿಗೆ ಆಶಾಕಾರ್ಯಕರ್ತೆಯರಿಗೆ ನೀಡಲಾಗುತ್ತಿದ್ದ ಡೈರಿಯನ್ನು ನೀಡಲಾಗುತ್ತಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು? | 2026-27 ನೇ ಸಾಲಿಗೆ ಸಂಬಂಧಿಸಿದಂತೆ ಆಶಾ ಡೈರಿಯ ಮುದ್ರಣಕ್ಕೆ ಕಾರ್ಯಾದೇಶವನ್ನು ನೀಡಲಾಗಿದೆ. |
| ಉ) | ಆಶಾ ಕಾರ್ಯಕರ್ತೆಯರಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಮನವಿಗಳು, ಪ್ರತಿಭಟನೆಗಳು ಹಾಗೂ ಬೇಡಿಕೆಗಳ ಸಂಖ್ಯೆ ಎಷ್ಟು ಅವುಗಳಲ್ಲಿ ಯಾವ ಯಾವ ಬೇಡಿಕೆಗಳನ್ನು ಸರ್ಕಾರ ಈವರೆಗೆ ಈಡೇರಿಸಿದೆ. | 2024-25 ನೇ ಸಾಲಿನಿಂದ 2026-27 ನೇ ಸಾಲಿನವರೆಗೂ ಒಟ್ಟು ನಾಲ್ಕು ಪ್ರತಿಭಟನೆಗಳು ನಡೆದಿರುತ್ತವೆ.<br><br>ಬೇಡಿಕೆಗಳ ಸಂಖ್ಯೆ ಮತ್ತು ಈ ಬೇಡಿಕೆಗಳಿಗೆ ನೀಡಲಾದ ಪ್ರತಿಸ್ಪಂದನೆಗಳ ಕುರಿತಾದ ಮಾಹಿತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |
| ಊ) | ಆಶಾಕಾರ್ಯಕರ್ತೆಯರ ಮಾಸಿಕ ಗೌರವಧನವನ್ನು ಹೆಚ್ಚಿಸುವುದು ಅವರಿಗೆ ಕನಿಷ್ಠ ವೇತನ, ಆರೋಗ್ಯ ವಿಮೆ, ಅಪಘಾತ ವಿಮೆ ಹಾಗೂ ಇತರ ಸಾಮಾಜಿಕ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಸರ್ಕಾರದ ನಿಲುವೇನು? | ಆಶಾ ಕಾರ್ಯಕರ್ತೆಯರಿಗೆ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>1. ಆಶಾ ಕಾರ್ಯಕರ್ತೆಯರು ಮತ್ತು ಅವರ ಅವಲಂಬಿತರಿಗೆ ಆಯುಷ್ಮಾನ್ ಭಾರತ- ಪ್ರಧಾನ ಮಂತ್ರಿ ಜನಾರೋಗ್ಯ- ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ವಾರ್ಷಿಕ 5 ಲಕ್ಷ ರೂಪಾಯಿಗಳ ನಗದು ರಹಿತ ಚಿಕಿತ್ಸೆಯನ್ನು ನೀಡಲಾಗುತ್ತಿದೆ.<br>2. ಸನ್ಮಾನ್ಯ ಪ್ರಧಾನ ಮಂತ್ರಿಗಳ ಸಾಮಾಜಿಕ ಸುರಕ್ಷಾ ಯೋಜನೆಗಳಾದ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಯೋಜನೆಯಡಿ ವಿಮಾ ಸೌಲಭ್ಯ, ಈ ಯೋಜನೆಗಳಿಗೆ ತಗಲುವ ವಾರ್ಷಿಕ ಪ್ರೀಮಿಯಂನ ಮೊತ್ತವಾದ ರೂ.456/- (ರೂ.436/- ಮತ್ತು ರೂ.20/-) ನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುದಾನದಿಂದ ನೀಡಲಾಗುತ್ತಿದೆ. |

ಸಂಖ್ಯೆ: ಆಕುಕ 89 ಎಸ್.ಟಿ.ಕ್ಯೂ 2026

(ಯು.ಟಿ. ಖಾದರ್ ಫರೀದ್)
ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

2023-24 ನೇ ಸಾಲಿನಿಂದ 2026-27 ನೇ ಸಾಲಿನ ವರೆಗೆ ಆಶಾ ಕಾರ್ಯಕರ್ತೆಯರ ಮಂಜೂರಾದ ಮತ್ತು ಕಡಿತಗೊಳಿಸಲಾದ ಸ್ಥಾನಗಳ ಮಾಹಿತಿ

| ಕ್ರ.ಸಂ | ಜಿಲ್ಲೆ | 2023-24 | | | | 2024-25 | | | | 2025-26 | | | | 2026-27 | | | |
|---|---|---|---|---|---|---|---|---|---|---|---|---|---|---|---|---|---|
| | | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | |
| | | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ | ಮಂಜೂರಾದ ಸಂಖ್ಯೆ | ಕಡಿತಗೊಳಿಸಲಾದ ಸಂಖ್ಯೆ |
| 1. | ಬಾಗಲಕೋಟೆ | 1351 | 0 | 96 | 0 | 1351 | 0 | 96 | 0 | 1351 | 0 | 96 | 0 | 1295 | 56 | 112 | 0 |
| 2. | ಬಳ್ಳಾರಿ | 924 | 0 | 117 | 0 | 924 | 0 | 117 | 0 | 924 | 0 | 117 | 0 | 891 | 33 | 125 | 0 |
| 3. | ಬೆಂಗಳೂರು ಗ್ರಾಮಾಂತರ | 800 | 0 | 34 | 0 | 800 | 0 | 34 | 0 | 800 | 0 | 34 | 0 | 699 | 101 | 49 | 0 |
| 4. | ಬೆಂಗಳೂರು ನಗರ | 873 | 0 | 0 | 0 | 873 | 0 | 0 | 0 | 873 | 0 | 0 | 0 | 674 | 199 | 10 | 0 |
| 5. | ಬೆಂಗಳೂರು ದಕ್ಷಿಣ | 810 | 0 | 69 | 0 | 810 | 0 | 69 | 0 | 810 | 0 | 69 | 0 | 690 | 120 | 75 | 0 |
| 6. | ಬೆಳಗಾವಿ | 3742 | 0 | 120 | 0 | 3742 | 0 | 120 | 0 | 3742 | 0 | 120 | 0 | 3531 | 211 | 195 | 0 |
| 7. | ಬೀದರ್ | 1310 | 0 | 52 | 0 | 1310 | 0 | 52 | 0 | 1310 | 0 | 52 | 0 | 1264 | 46 | 77 | 0 |
| 8. | ಚಿಕ್ಕಬಳ್ಳಾಪುರ | 1017 | 0 | 47 | 0 | 1017 | 0 | 47 | 0 | 1017 | 0 | 47 | 0 | 891 | 126 | 59 | 0 |
| 9. | ಚಿತ್ರದುರ್ಗ | 1391 | 0 | 90 | 0 | 1391 | 0 | 90 | 0 | 1391 | 0 | 90 | 0 | 1305 | 86 | 105 | 0 |
| 10. | ಚಾಮರಾಜನಗರ | 780 | 0 | 20 | 0 | 780 | 0 | 20 | 0 | 780 | 0 | 20 | 0 | 709 | 71 | 30 | 0 |
| 11. | ಚಿಕ್ಕಮಗಳೂರು | 939 | 0 | 20 | 0 | 939 | 0 | 20 | 0 | 939 | 0 | 20 | 0 | 875 | 64 | 44 | 0 |
| 12. | ದಕ್ಷಿಣ ಕನ್ನಡ | 1251 | 0 | 130 | 0 | 1251 | 0 | 130 | 0 | 1251 | 0 | 130 | 0 | 1138 | 113 | 139 | 0 |
| 13. | ದಾವಣಗೆರೆ | 1139 | 0 | 89 | 0 | 1139 | 0 | 89 | 0 | 1139 | 0 | 89 | 0 | 1089 | 50 | 137 | 0 |
| 14. | ಧಾರವಾಡ | 832 | 0 | 201 | 0 | 832 | 0 | 201 | 0 | 832 | 0 | 201 | 0 | 784 | 48 | 215 | 0 |
| 15. | ಗದಗ | 715 | 0 | 52 | 0 | 715 | 0 | 52 | 0 | 715 | 0 | 52 | 0 | 671 | 44 | 76 | 0 |
| 16. | ಗ್ರೇಟರ್ ಬೆಂಗಳೂರು ಪ್ರಾಧಿಕಾರ | 0 | 0 | 1229 | 0 | 0 | 0 | 1229 | 0 | 0 | 0 | 1229 | 0 | 0 | 0 | 1500 | 0 |
| 17. | ಹಾವೇರಿ | 1450 | 0 | 51 | 0 | 1450 | 0 | 51 | 0 | 1450 | 0 | 51 | 0 | 1391 | 59 | 79 | 0 |
| 18. | ಹಾಸನ | 1465 | 0 | 33 | 0 | 1465 | 0 | 33 | 0 | 1465 | 0 | 33 | 0 | 1365 | 100 | 70 | 0 |
| 19. | ಕಲಬುರಗಿ | 1812 | 0 | 87 | 0 | 1812 | 0 | 87 | 0 | 1812 | 0 | 87 | 0 | 1760 | 52 | 165 | 0 |
| 20. | ಕೊಡಗು | 492 | 0 | 10 | 0 | 492 | 0 | 10 | 0 | 492 | 0 | 10 | 0 | 433 | 59 | 16 | 0 |
| 21. | ಕೋಲಾರ | 900 | 0 | 74 | 0 | 900 | 0 | 74 | 0 | 900 | 0 | 74 | 0 | 762 | 138 | 89 | 0 |
| 22. | ಕೊಪ್ಪಳ | 1209 | 0 | 134 | 0 | 1209 | 0 | 134 | 0 | 1209 | 0 | 134 | 0 | 1110 | 99 | 144 | 0 |
| 23. | ಮಂಡ್ಯ | 1372 | 0 | 25 | 0 | 1372 | 0 | 25 | 0 | 1372 | 0 | 25 | 0 | 1298 | 74 | 60 | 0 |
| 24. | ಮೈಸೂರು | 1731 | 0 | 108 | 0 | 1731 | 0 | 108 | 0 | 1731 | 0 | 108 | 0 | 1593 | 138 | 254 | 0 |
| 25. | ರಾಯಚೂರು | 1411 | 0 | 97 | 0 | 1411 | 0 | 97 | 0 | 1411 | 0 | 97 | 0 | 1307 | 104 | 122 | 0 |
| 26. | ಶಿವಮೊಗ್ಗ | 1275 | 0 | 87 | 0 | 1275 | 0 | 87 | 0 | 1275 | 0 | 87 | 0 | 1175 | 100 | 130 | 0 |
| 27. | ತುಮಕೂರು | 2111 | 0 | 43 | 0 | 2111 | 0 | 43 | 0 | 2111 | 0 | 43 | 0 | 2003 | 108 | 112 | 0 |
| 28. | ಉಡುಪಿ | 1008 | 0 | 20 | 0 | 1008 | 0 | 20 | 0 | 1008 | 0 | 20 | 0 | 888 | 120 | 35 | 0 |
| 29. | ಉತ್ತರ ಕನ್ನಡ | 1379 | 0 | 21 | 0 | 1379 | 0 | 21 | 0 | 1379 | 0 | 21 | 0 | 1298 | 81 | 73 | 0 |
| 30. | ವಿಜಯನಗರ | 987 | 0 | 60 | 0 | 987 | 0 | 60 | 0 | 987 | 0 | 60 | 0 | 952 | 35 | 82 | 0 |
| 31. | ವಿಜಯಪುರ | 1754 | 0 | 54 | 0 | 1754 | 0 | 54 | 0 | 1754 | 0 | 54 | 0 | 1717 | 37 | 87 | 0 |
| 32. | ಯಾದಗಿರಿ | 965 | 0 | 59 | 0 | 965 | 0 | 59 | 0 | 965 | 0 | 59 | 0 | 930 | 35 | 59 | 0 |
| | ಒಟ್ಟು | 39195 | 0 | 3329 | 0 | 39195 | 0 | 3329 | 0 | 39195 | 0 | 3329 | 0 | 36488 | 2707 | 4525 | 0 |

## Annexure- 2

| ಕ್ರ.ಸಂ | ಜಿಲ್ಲೆಯ ಹೆಸರು | ಬಾಕಿ ಇರುವ ಮೊತ್ತ (ಮೊತ್ತ ರೂ. ಗಳಲ್ಲಿ) |
|---|---|---|
| 1. | ಬಾಗಲಕೋಟೆ | 280,000 |
| 2. | ಬಳ್ಳಾರಿ | 0 |
| 3. | ಬೆಂಗಳೂರು ಗ್ರಾಮಾಂತರ | 0 |
| 4. | ಬೆಂಗಳೂರು ನಗರ | 0 |
| 5. | ಬೆಂಗಳೂರು ದಕ್ಷಿಣ | 0 |
| 6. | ಬೆಳಗಾವಿ | 0 |
| 7. | ಬೀದರ್ | 0 |
| 8. | ಚಿಕ್ಕಬಳ್ಳಾಪುರ | 350,000 |
| 9. | ಚಿತ್ರದುರ್ಗ | 0 |
| 10. | ಚಾಮರಾಜನಗರ | 0 |
| 11. | ಚಿಕ್ಕಮಗಳೂರು | 0 |
| 12. | ದಕ್ಷಿಣ ಕನ್ನಡ | 0 |
| 13. | ದಾವಣಗೆರೆ | 0 |
| 14. | ಧಾರವಾಡ | 0 |
| 15. | ಗದಗ | 0 |
| 16. | ಗ್ರೇಟರ್ ಬೆಂಗಳೂರು ಪ್ರಾಧಿಕಾರ | 0 |
| 17. | ಹಾವೇರಿ | 0 |
| 18. | ಹಾಸನ | 0 |
| 19. | ಕಲಬುರಗಿ | 0 |
| 20. | ಕೊಡಗು | 0 |
| 21. | ಕೋಲಾರ | 0 |
| 22. | ಕೊಪ್ಪಳ | 0 |
| 23. | ಮಂಡ್ಯ | 0 |
| 24. | ಮೈಸೂರು | 115,000 |
| 25. | ರಾಯಚೂರು | 7800 |
| 26. | ಶಿವಮೊಗ್ಗ | 0 |
| 27. | ತುಮಕೂರು | 0 |
| 28. | ಉಡುಪಿ | 0 |
| 29. | ಉತ್ತರ ಕನ್ನಡ | 0 |
| 30. | ವಿಜಯನಗರ | 11,066,768 |
| 31. | ವಿಜಯಪುರ | 80,000 |
| 32. | ಯಾದಗಿರಿ | 95,000 |
| | **ಒಟ್ಟು** | **11,994,568** |

ಮಾಹಿತಿ : -

1. ಜಿಲ್ಲೆಗಳಿಂದ ಸಲ್ಲಿಕೆಯಾಗಿರುವ ಮಾಹಿತಿಯ ಆಧಾರದಮೇಲೆ ವರದಿಯನ್ನು ನೀಡಲಾಗಿರುತ್ತದೆ.

2. ಜೂಲೈ -2026 ತಿಂಗಳಿಗೆ ಸಂಬಂದಿಸಿದ ಪಾವತಿ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.

# ಅನುಬಂಧ-3

## ಆಶಾ ಕಾರ್ಯಕರ್ತೆಯರ ಸಂಘಟನೆಯ ಪದಾಧಿಕಾರಿಗಳು ಸಲ್ಲಿಸಿರುವ ಬೇಡಿಕೆಗಳ ವಿವರ

1. ಕೇಂದ್ರ ಸರ್ಕಾರದ ಪ್ರೋತ್ಸಾಹಧನವನ್ನು ಮತ್ತು ರಾಜ್ಯ ಸರ್ಕಾರದ ಗೌರವಧನವನ್ನು ಒಟ್ಟುಗೂಡಿಸಿ ಮಾಸಿಕ ಕನಿಷ್ಠ ರೂ. 15,000 ವೇತನವನ್ನು ನಿಗದಿಪಡಿಸಬೇಕು.
2. ನಗರ ಆಶಾ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕನಿಷ್ಠ ರೂ. 2000/- ರಷ್ಟು ಗೌರವಧನವನ್ನು ಹೆಚ್ಚಳ ಮಾಡುವುದು.
3. 60 ವರ್ಷಕ್ಕೆ ಸೇವಾ ನಿವೃತ್ತಿ ಪಡೆಯುವ ಆಶಾ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇರುವಂತೆ ರೂ. 5 ಲಕ್ಷಕ್ಕೆ ಹೆಚ್ಚಳ ಮಾಡುವುದು.
4. ತೀವ್ರವಾದ ಅನಾರೋಗ್ಯ, ಚಿಕಿತ್ಸೆ ಪಡೆಯುವ ಅವಧಿಯಲ್ಲಿ ಕನಿಷ್ಠ 3 ತಿಂಗಳುಗಳ ಕಾಲ ರಾಜ್ಯ ಸರ್ಕಾರದ ನಿಶ್ಚಿತ ಗೌರವಧನ ಮತ್ತು ಆವರ್ತಕ ಚಟುವಟಿಕೆಗಳ (Routine activity) ನಿಗದಿತ ಪ್ರೋತ್ಸಾಹಧನ ನೀಡುವುದು.
5. ಆಶಾ ಕಾರ್ಯಕ್ರಮದಲ್ಲಿ ಸುಗಮಕಾರರ (ಫೆಸಿಲಿಟೇಟರ್) ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅವರ ಹುದ್ದೆಗೆ ತಕ್ಕಂತೆ ಮಾಸಿಕ ವೇತನ, ಪ್ರಯಾಣ ಭತ್ಯೆ, ಇತ್ಯಾದಿಗಳನ್ನು ಹೆಚ್ಚಿಸಬೇಕು. ಆಶಾಗಳ ಸಂಖ್ಯೆಗೆ ಅನುಗುಣವಾಗಿ ಆಶಾ ಸುಗಮಕಾರರನ್ನು ನೇಮಿಸಿ, ನಗರ ಪ್ರದೇಶಗಳಿಗೂ ಸುಗಮಕಾರರನ್ನು ನೇಮಿಸಲು ಬೇಡಿಕೆ.
6. ಮೊಬೈಲ್ ಆಧಾರಿತ ಚಟುವಟಿಕೆಗಳನ್ನು ಒತ್ತಯಪೂರ್ವಕವಾಗಿ ಮಾಡಿಸುತ್ತಿರುವುದನ್ನು ಕೈಬಿಡಿ ಅಥವಾ ಮೊಬೈಲ್ ಡಾಟಾ ಒದಗಿಸಿ, ಮೊಬೈಲ್ ಕೆಲಸಗಳಿಗೆ ಪ್ರೋತ್ಸಾಹಧನ ನಿಗದಿ ಮಾಡಿ, ಯಾರಿಗೆ ಮೊಬೈಲ್ ಮಾಡಲು ಆಗುವುದಿಲ್ಲವೋ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಬೇಡಿಕೆ.
7. ಸುವರ್ಣ ಆರೋಗ್ಯ ಟ್ರಸ್ಟ್ ನ ಆರೋಗ್ಯ ವಿಮಾ ಯೋಜನೆಯಂತೆ 5 ಲಕ್ಷ ರೂ. ವರೆಗೆ ವಿವಿಧ ಕಾಯಿಲೆಗಳಿಗೆ ಉಚಿತ ಚಿಕಿತ್ಸೆಯನ್ನು ಆಶಾ ಮತ್ತು ಆಶಾ ಕುಟುಂಬಕ್ಕೆ ನೀಡಲು ಬೇಡಿಕೆ.
8. ಆಶಾ ಕಾರ್ಯಕರ್ತೆಯರು ಕರ್ತವ್ಯ ನಿರ್ವಹಿಸುವಾಗ ಮೃತಪಟ್ಟಲ್ಲಿ ಅಥವಾ ಅಪಘಾತ ಹೊಂದಿದ್ದಲ್ಲಿ ಮರಣ ಪರಿಹಾರ.
9. ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ, ಕನಿಷ್ಠ ವೇತನ, ಗ್ರಾಜ್ಯುಟಿ, ಪಿಎಫ್-ಇಎಸ್ಐ ಸೌಲಭ್ಯ ನೀಡಲು ಬೇಡಿಕೆ.
10. ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಂಪೋನೆಂಟ್‌ಗಳ ಹಣ ಬಿಡುಗಡೆ ಮಾಡಿ (ಟಿಬಿ, ಟಿಬಿಐ ಇತ್ಯಾದಿ).

11. SAMASTA APP ನ್ನು ಆಶಾ ಪ್ರೋತ್ಸಾಹಧನಕ್ಕೆ ಲಿಂಕ್ ಮಾಡುವುದನ್ನು ಕೈಬಿಡಬೇಕು ಮತ್ತು SAMASTA APP ಹಾಗೂ ಇನ್ನಿತರೆ ಮೊಬೈಲ್ mobile app ಗಳ ಮೂಲಕ ಕಾರ್ಯನಿರ್ವಹಿಸುವಲ್ಲಿ ಆಶಾ ಕಾರ್ಯಕರ್ತೆಯರಿಗೆ ಎದುರಾಗುತ್ತಿರುವ ತೊಂದರೆಗಳನ್ನು ಪರಿಹರಿಸಬೇಕು.
12. ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ-2026 ಯ ಕರ್ತವ್ಯಕ್ಕೆ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸುವ ಕುರಿತು ಇರುವ ಸಮಸ್ಯೆಗಳನ್ನು ಪರಿಹರಿಸಬೇಕು.
13. ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ವಿರುದ್ಧವಾಗಿರುವ ತರ್ಕ ಬದ್ಧಗೊಳಿಸುವಿಕೆ ಮತ್ತು ಮೌಲ್ಯ ಮಾಪನದ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರ ಮೇಲೆ ನಡೆಯುತ್ತಿರುವ ಕಿರುಕುಳ ನಿಲ್ಲಿಸಬೇಕು ಮತ್ತು ಈ ಕುರಿತಾದ ಅನಗತ್ಯ ಆದೇಶಗಳನ್ನು ಹಿಂಪಡೆಯಬೇಕು.

**ಈಡೇರಿಸಲಾದ ಬೇಡಿಕೆಗಳ ವಿವರ:**

1. ಆರ್ಥಿಕ ಸಾಲು 2025-26 ನೇ ಸಾಲಿನಲ್ಲಿ ಮಾಸಿಕ ರೂ.1000 ಗಳ ತಂಡ ಆಧಾರಿತ ಪ್ರೋತ್ಸಾಹಧನವನ್ನು ಆಯುಷ್ಮಾನ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಒಳಪಡದ ಮತ್ತು ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ನೀಡಲು ಸರ್ಕಾರಿ ಆದೇಶ ಹೊರಡಿಸಲಾಗಿರುತ್ತದೆ.
2. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯ ಆಶಾ ಕಾರ್ಯಕ್ರಮದ ಎಂಟು Routine & Recurring activities ನ ಮಾಸಿಕ ಪ್ರೋತ್ಸಾಹಧನವಾದ ರೂ.2000/- ಗಳನ್ನು ಸಂಪೂರ್ಣವಾಗಿ ನೀಡಲು ಅಧಿಕೃತ ಜ್ಞಾಪನಾ ಪತ್ರವನ್ನು ದಿ||05.03.2024 ರಂದು ಹೊರಡಿಸಲಾಗಿದೆ.
3. **ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನಾರೋಗ್ಯ - ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ಆಶಾ ಕಾರ್ಯಕರ್ತೆಯರು ಮತ್ತು ಅವಲಂಬಿತರಿಗೆ ವಾರ್ಷಿಕ ಐದು ಲಕ್ಷ ರೂಪಾಯಿಗಳ ವರೆಗೆ ನಗದು ರಹಿತ ಚಿಕಿತ್ಸಾ ವ್ಯವಸ್ಥೆ.**
4. ಆಶಾ ಕಾರ್ಯಕರ್ತೆಯರಿಗೆ ಸಿಯುಜಿ ದೂರವಾಣಿ ಸಂಪರ್ಕ ನೀಡಲಾಗಿದೆ.
5. ಆಶಾ ಕಾರ್ಯಕರ್ತೆಯರಿಗೆ ಸಾಮಾಜಿಕ ಸುರಕ್ಷೆಯನ್ನು ನೀಡುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಜೀವನಜ್ಯೋತಿ ಭಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯನ್ನು ಅನುಷ್ಠಾನ ಮಾಡಲಾಗಿದ್ದು, ಇದಕ್ಕೆ ತಗುಲುವ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುದಾನದಲ್ಲಿ ಭರಿಸಲಾಗುತ್ತಿದೆ.
6. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 10 ವರ್ಷ ಸೇವೆ ಸಲ್ಲಿಸಿ ಕರ್ತವ್ಯ ತ್ಯಜಿಸುವ ಹಾಗೂ 60 ವರ್ಷ ತುಂಬಿದ ನಂತರ ಕರ್ತವ್ಯ ಆಶಾ ಕಾರ್ಯಕರ್ತೆಯರಿಗೆ ರೂ.20,000/- ಗಳ ಏಕಗಂಟಿನ ಪ್ರೋತ್ಸಾಹಧನವನ್ನು ನೀಡಲಾಗುವುದು.